**"ಜಂತೂನಾಂ ನರಜನ್ಮದುರ್ಲಭಂ"** ಎಂದು ಶ್ರೀ ಶಂಕರಾಚಾರ್ಯರ ವಾಣಿ. ದುರ್ಲಭವಾದ ಈ ಮಾನವ ಜನ್ಮ ಪರಮಾತ್ಮನ ಅನುಗ್ರಹವಿಲ್ಲದೇ ಸಿಗಲಾರದು. ಅವನ ಕೃಪೆಯಿಂದ ಪ್ರಾಪ್ತವಾದ ಈ ಜನ್ಮವನ್ನು ನಾವು ಸಾರ್ಥಕಪಡಿಸಿಕೊಳ್ಳಲು ಶ್ರೀಗುರುವಿನ ಪಾದಪದ್ಮವನ್ನೇ ಆಶ್ರಯಿಸಬೇಕು. ಶ್ರೇಷ್ಠದಾಸ ಪಂಥವು ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ" ಎಂದು ಹೇಳಿದೆ. **"ಪುನರಪಿ ಜನನಂ ಪುನರಪಿ ಮರಣಂ"** ಜೀವಿಯು ಪುನ: ಪುನ: ಹುಟ್ಟಿ ಸತ್ತು ಬಳಲುತ್ತಾನೆ. ಹಾಗಾದರೆ ಈ ಸುತ್ತುವಿಕೆಗೆ ಕೊನೆಯೇ ಇಲ್ಲವೇ? ಇದೆ. ಹಾಗಾದರೆ ಅದು ಎಲ್ಲಿದೆ? ಸದ್ಗುರುವಿನ ಪಾದಾರವಿಂದಗಳಲ್ಲಿ, ಅಂತಹ ಸದ್ಗುರುವಿನ ಸ್ಥಾನವನ್ನೇರಿ ರಾರಾಜಿಸಿದವರಲ್ಲಿ ಸಿದ್ಧಯೋಗಿಗಳಾದ "ಖೇಚರಿಯೋಗಿ"ಗಳೆಂದೇ ಪ್ರಖ್ಯಾತಿ ಹೊಂದಿದ್ದ ಪರಮಪೂಜ್ಯ ಶ್ರೀ ಕಲಸಿ ನೃಸಿಂಹಾನಂದ ಸರಸ್ವತೀ ಸ್ವಾಮಿಗಳೂ ಒಬ್ಬರು.

ನಮ್ಮ ಈ ಭರತ ಭೂಮಿಯಲ್ಲಿ ಮಾನವರ ಸೂಕ್ಷ್ಮ ಇಂದ್ರಿಯಗಳನ್ನು ಪ್ರಚೋದಿಸಿ ನಿಜವಾದ ಅರಿವನ್ನು ಮೂಡಿಸಿದ ಶ್ರೇಯಸ್ಸು ಸಾಧು-ಸಂತರಿಗೆ ಸಲ್ಲುತ್ತದೆ. ಇಂತಹ ಸಾಧು-ಸಂತರಲ್ಲೇ ಖೇಚರಿಯೋಗಿ ಕಲಸಿ ನೃಸಿಂಹಾನಂದ ಸರಸ್ವತೀ ಸ್ವಾಮಿಗಳೂ ಸೇರುವರು. ಅವರ ಬಗ್ಗೆ ಒಂದು ಕಿರುಲೇಖನ.

**<u>ದಿವಿಯಿಂದ ಭುವಿಗಿಳಿದ ಯೋಗಿ :-</u>** ಕದಂಬರ ರಾಜಧಾನಿಯಾದ ಪುರಾಣಪ್ರಸಿದ್ಧ "ವೈಜಯಂತಿ"(ಬನವಾಸಿ) ಕ್ಷೇತ್ರವೇ ಭುವಿಗಿಳಿದ ಈ ಯೋಗಿವರನ ಹುಟ್ಟೂರು. ಮಧುಕೇಶ್ವರ ದೇವಸ್ಥಾನದ ಹಿಂಭಾಗದಲ್ಲೊಂದು ಮಧ್ಯಮವರ್ಗದ ಬ್ರಾಹ್ಮಣ ಕುಟುಂಬ. ಶ್ರೀ ನರಸಿಂಹ ಭಟ್ಟರೇ ಅದಕ್ಕೆ ಯಜಮಾನ. ಅವರ ಪತ್ನಿ ಫಣಿಯಮ್ಮ ಸಾಧ್ವಿಶಿರೋಮಣಿಯಾಗಿದ್ದರು. ದಂಪತಿಗಳೀರ್ವರೂ ಶ್ರೀ ಮಧುಕೇಶ್ವರನಲ್ಲಿ ಸದಾ ಕುಲೋದ್ಧಾರಕ ಪುತ್ರನನ್ನು ಪ್ರಾರ್ಥಿಸುತ್ತಿದ್ದರು. ಅದರ ಫಲವಾಗಿ ಅವರಿಗೆ ಶ್ರೀಶಾಲಿವಾಹನ ಗತಶಕ 1839ನಳ ಸಂವತ್ಸರದ ಫಾಲ್ಗುಣ ಕೃಷ್ಣ ದ್ವಾದಶಿ ಮಂಗಳವಾರ (20-03-1917)ದಂದು ಗಂಡು ಮಗು ಜನಿಸಿತು. ಆ ಮಗುವಿಗೆ ಚಿದಂಬರನೆಂದು ನಾಮಕರಣ ಮಾಡಲಾಯಿತು. ಹೀಗೆ ಮುಂದಿನ ದಿನಗಳಲ್ಲಿ ಮೂವರು ಗಂಡು ಇಬ್ಬರು ಹೆಣ್ಣುಮಕ್ಕಳು ಈ ದಂಪತಿಗಳಿಗೆ ಜನಿಸಿದರು.

**<u>ಕಲಸಿಗೆ ಪಯಣ:-</u>** ಕೌಟುಂಬಿಕ ಸಮಸ್ಯೆಯ ಪರಿಹಾರದ ಹಿನ್ನೆಲೆಯಲ್ಲಿ ಶ್ರೀ ನರಸಿಂಹ ಭಟ್ಟರು ಸಾಗರದ ಕಲಸಿಗೆ ಬಂದರು. ಅಲ್ಲಿಯೇ ಮಗ ಚಿದಂಬರನಿಗೆ ಅಲ್ಪಸ್ವಲ್ಪ ಶಾಲಾಭ್ಯಾಸವಾಯಿತು. ಸಕಾಲಕ್ಕೆ ಉಪನಯನ ಸಂಸ್ಕಾರವೂ ನೆರವೇರಿತು. ಆ ಹೊತ್ತಿಗೆ ನರಸಿಂಹ ಭಟ್ಟರ ದೇಹ ಜರ್ಝರಿತವಾಗಿತ್ತು. ಅಧ್ಯಾತ್ಮ ಪಥದಲ್ಲಿ ಸಾಗಿದ ಅವರು ಒಂದು ದಿನ ಪರಮಾತ್ಮನ ಪಾದ ಸೇರಿಯೇ ಬಿಟ್ಟರು. ಅಂದಿನಿಂದ ಕೆಲದಿನ ತಾಯಿ ಫಣಿಯಮ್ಮನವರೇ ಕುಟುಂಬ ನಿರ್ವಹಿಸಿದರು. ವೇದವಿದ್ಯೆ ಅತ್ಯಂತ ಘನವಿದ್ಯೆಯಾಗಿದ್ದರೂ ಇದರಿಂದ ಸಿಗುವ ಪುರುಷಾರ್ಥವೆಲ್ಲ ಉದರಪೋಷಣೆಗೇ ಸೀಮಿತವೆಂದರಿತು ತಾನು ನಿಜವಾದ ವಿದ್ಯೆಯನ್ನು ಪಡೆಯಬೇಕೆಂಬ ಮನಸ್ಸು ಆ ಚಿಕ್ಕವಯಸ್ಸಿನಲ್ಲಿಯೇ ಅಂಕುರಿಸಿತ್ತು. ಹೀಗಿರುವಾಗ, ಒಮ್ಮೆ ಸಹಪಾಠಿಗಳ ಸಂಗಡ ಯಾಣಕ್ಕೆ ಹೋದಾಗ ಅಲ್ಲಿ ಶ್ರೀಧರರ ದರ್ಶನವಾಯಿತು. ಅವರಿಂದ ಮಂತ್ರಾಕ್ಷತೆ ಸ್ವೀಕರಿಸಿ ಹರಸಲ್ಪಟ್ಟರು. ಅದು ಇವರ ಚಿಂತನೆಗೆ ಇನ್ನಷ್ಟು ಪುಷ್ಟಿ ಒದಗಿಸಿತು.

**<u>ಹೊಸತನ:-</u>** ಚಿದಂಬರನಿಗೀಗ 18ವರ್ಷ ಪ್ರಪಂಚದ ಅರಿವಾಗತೊಡಗಿತ್ತು. ತಂದೆಯ ವಿಯೋಗದ ದು:ಖವನ್ನು ನಿಧಾನವಾಗಿ ಮರೆತು ಸಹೋದರಿಯರ ವಿವಾಹಮಾಡಿ ಮುಗಿಸಿದ. ಒಮ್ಮೆ ಕೊನೆ ಕೊಯ್ಯಲು ಅತಿ ಎತ್ತರದಮರವೇರಿ ಬಗ್ಗಿಸಿದಾಗ ಮರ ಮುರಿದು, ಧರೆಗೆ ಉರುಳಿದ ಚಿದಂಬರ ತಾನೇ ಮೇಲೆದ್ದು ಬಂದ ಕಾರ್ಯವನ್ನು ಪೂರ್ಣಗೊಳಿಸಿದ. ಈ ಘಟನೆಯಿಂದ ಆತನಿಗೆ ಈ ದೇಹ ಭೋಗಕ್ಕಾಗಿ ಬಂದದ್ದಲ್ಲ ಇದರಿಂದ ಏನೋ ಸಾಧಿಸುವುದಿದೆ ಎಂದರಿತು ಗುರುವನ್ನು ಅರಸುತ್ತಾ ಹೊರಟೇ ಬಿಟ್ಟ.

**<u>ಒಮ್ಮೆ ಶಿಗೇಹಳ್ಳಿ ಶಿವಾನಂದರ ಸನ್ನಿಧಿಯಲ್ಲಿ :</u>** ಪರಮಾತ್ಮನ ನಾಮಸ್ಮರಣೆ ಮಾಡುತ್ತ ಮಾಡುತ್ತ ಸರೋವರದಲ್ಲಿ ಮಿಂದು ಶಿವಾನಂದರ ಪಾದಗಳಿಗೆ ವಂದಿಸಿ ತಾನು ಏನನ್ನಾದರೂ ಸಾಧಿಸಬೇಕು. ಅನುಗ್ರಹಿಸಿ ಎಂದು ಕೇಳಿದನಂತೆ. ಧ್ಯಾನಾವಿಷ್ಟರಾದ ಶಿವಾನಂದರು ಯೋಗಸಾಧಕನಾಗೆಂದು ಹರಸಿ ಶ್ರೀಧರರ ಅನುಜ್ಞೆಯ ಪ್ರಕಾರ ಅವರ ಎದುರಿನಲ್ಲಿಯೇ ಖೇಚರಿಯೋಗವನ್ನು ಉಪದೇಶಿಸಿದರಂತೆ.

**<u>ಖೇಚರಿ :</u>** ಖೇಚರಿಯೋಗವು ಪರಮಾತ್ಮನ ಪ್ರಾಪ್ತಿ ಅಥವಾ ಸಮಾಧಿಸಿದ್ಧಿಯನ್ನೇ ಮುಖ್ಯಗುರಿಯನ್ನಾಗಿಟ್ಟುಕೊಂಡು ಒಂದು ಹಠಯೋಗದ ಸಾಲಿನಲ್ಲಿ ಬರುವ ಒಂದು ವಿಶಿಷ್ಟವಾದ ಸಾಧನಾ ಪ್ರಕಾರ ಇದನ್ನು ಲಂಬಿಕಾಯೋಗ; ಶಾಂಭವಿಮುದ್ರಾ, ನಭೋಮುದ್ರಾ ಮುಂತಾದ ಶಬ್ದಗಳಿಂದ ಕರೆಯುತ್ತಾರೆ. ಶಾಂಡಿಲ್ಯೋಪನಿಷತ್ತು ಹೇಳುವಂತೆ ಖೇಚರಿಯೋಗಿಯ ಮನಸ್ಸು ಮತ್ತು ಪ್ರಾಣವಾಯು ಒಳಗಿನ ಲಕ್ಷ್ಯಗಳಲ್ಲಿ ಕೇಂದ್ರೀತವಾಗಿರುತ್ತದೆಯಂತೆ. ಸುಷುಪ್ತಿಯೂ ಅಲ್ಲದ ಸ್ವಪ್ನವೂ ಅಲ್ಲದ ಸ್ಥಿತಿಯಲ್ಲಿ ಆತ ಪರಂಜ್ಯೋತಿ ಪರಮಾತ್ಮನನ್ನು ನೋಡುತ್ತಿರುತ್ತಾನಂತೆ. ಚಿದಂಬರರು ಸಾಧನೆ ಆರಂಭಿಸಿದರು. ಅಲ್ಲಿಂದ ಚಿದಂಬರ ಯೋಗಿಗಳಾದರು.

**<u>ಅಭೂತಪೂರ್ವ ಅನುಭವ :</u>** ಇಂತಹ ಯೋಗಸಾಧನೆಯಿಂದ ಕ್ರಮಗುಂಟಾದ ಪರಮಾದ್ಭುತ ಅನುಭವಗಳನ್ನು ಅವರು ತಮ್ಮ ಶಿಷ್ಯರಿಗೆ ಸುಲಭ ಮಾತುಗಳಲ್ಲಿ ತಿಳಿಸಲು ಪ್ರಯತ್ನಿಸುತ್ತಿದ್ದರು. ಅದರ ಬಗ್ಗೆ ಇದೊಂದು ಚಿಕ್ಕದರ್ಶನ. ಅದೊಂದು ದಿನ ಬ್ರಾಹ್ಮೀಮುಹೂರ್ತದಲ್ಲಿ ಧ್ಯಾನದಲ್ಲಿ ಅಂತರ್ಮುಖಿಯಾಗುತ್ತಿದ್ದಂತೆ ಮೂಲಾಧಾರದಿಂದ ಸಹಸ್ರಾರದವರೆಗೆ ಪ್ರಕಾಶಿಸುತ್ತಿರುವ ಬೆಳಕಿನ ಸಲೆಯೊಂದು ಮಿಂಚಿನಂತೆ ಮಿಂಚಿ ಕುಂಡಲಿನಿಯು ಜಾಗ್ರತವಾಗಿ ಒಂದೊಂದು ಚಕ್ರವನ್ನು ಕ್ರಮಿಸುತ್ತ ಅಂತಿಮವಾಗಿ ಅದು ಸಹಸ್ರಾರವನ್ನು ತಲುಪಿದೊಡನೆಯೇ ಆಧ್ಯಾತ್ಮಿಕ ಜ್ಞಾನದ ಪರಮಾನುಭವವಾಯಿತಂತೆ. ಆ ಸ್ಥಿತಿಯಲ್ಲಿಯೇ ಶ್ರೀ ಶ್ರೀಧರರಿಗೆ ಹಾಗೂ ಶ್ರೀ ಶಿವಾನಂದರಿಗೆ ನಮಸ್ಕರಿಸಿದರಂತೆ. ಯೋಗದ ಸಿದ್ಧಿಯ ಅನುಭವ ಈ ರೀತಿಯಲ್ಲಿ ಆಯಿತೆನ್ನುತ್ತಿದ್ದರು.

**<u>ಸಂನ್ಯಾಸಕ್ಕೆ ಸನ್ನಾಹ :</u>** ಯೋಗಸಾಧನೆಯನ್ನು ಇನ್ನೂ ತೀವ್ರವಾಗಿ ಮಾಡುತ್ತ ಪರಮಾತ್ಮನ ಗುಣಗಾನವನ್ನು ಪಠಿಸುತ್ತ ಶ್ರೀಕ್ಷೇತ್ರ ಕಾಶಿ, ಬದರಿ, ಚಿದಂಬರ, ನರಸೋಬವಾಡಿ, ಗಾಣಗಾಪುರ, ಗೋಕರ್ಣ ವಿವಿಧ ಕ್ಷೇತ್ರಗಳಲ್ಲಿ ತೀರ್ಥಸ್ನಾನ ಮಾಡಿ ಮೈಮನವನ್ನು ತಣಿಸುತ್ತಾ ಕ್ಷೇತ್ರಾಧೀಶ್ವರರನ್ನು ದರ್ಶನ ಮಾಡಿ ಪುನ:ಕಲಸಿಗೆ ಬಂದು ದೇವಸ್ಥಾನ ಜೀರ್ಣೋದ್ಧಾರ ಮಾಡಿ ಕೆಲದಿನ ಕಲಸಿಯಲ್ಲಿಯೇ ಅನುಷ್ಠಾನ ನಿರತರಾದರು. ಒಂದು ದಿನ ಅವರಿಗೆ ತಾನು ಸರ್ವ ಸಂಗ ಪರಿತ್ಯಾಗಿ ಆಗಬೇಕು. ನೊಂದ ಜೀವಿಗಳನ್ನು ಉದ್ಧರಿಸಬೇಕು, ಶರಣಾಗತರನ್ನು ರಕ್ಷಿಸಬೇಕು. ಅದಕ್ಕೋಸ್ಕರ ತಾನು ಅತ್ಯಂತ ಪವಿತ್ರತಮವಾದ ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿದರು.

**<u>ಸಂನ್ಯಾಸ ಸ್ವೀಕಾರ :</u>** ಕಂಚಿಯ ಪರಮಾಚಾರ್ಯರಾದ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳ ಸಾನ್ನಿಧ್ಯದಲ್ಲಿ ಅವರ

*Page Donated by : **Shri Suhas Gunishastri**, Prabhadevi In the memory ofhis parents **Late Smt. Rajeshwari & Late Shri P. V. Gunishastri** , Past President, H.W.T. (Dec.-2012)*

ನಿಕಟವರ್ತಿಗಳಾದ ಶ್ರೀ ನಾರಾಯಣಾನಂದ ಸರಸ್ವತೀ ಸ್ವಾಮಿಗಳವರಿಂದ ಸಿದ್ಧಾರ್ಥಿ ಸಂವತ್ಸರದ ಮಾಘ ಕೃಷ್ಣ ಸಪ್ತಮಿ ಶುಕ್ರವಾರ (28–02–1980) ಬೆಳಗಿನ 10.30ರಿಂದ 12.30ರ ಸಮಯದಲ್ಲಿ ಚಿದಂಬರ ಸಾಧುಗಳು ಶ್ರೀ ನೃಸಿಂಹಾನಂದ ಸರಸ್ವತೀ ಸ್ವಾಮಿಗಳೆಂಬ ನಾಮಧೇಯವನ್ನು ಹೊಂದಿ ತುರೀಯಾಶ್ರಮಿಗಳಾದರು. ಕೆಲದಿನ ಅಲ್ಲಿಯೇ ಇದ್ದು ಅನಂತರ ಪುನ: ಕಲಸಿಗೆ ಬಂದು ಯೋಗ ಅನುಷ್ಠಾನ ನಿರತರಾದರು.

<u>**ಸ್ವರ್ಣವಲ್ಲೀ ಸಂಸ್ಥಾನಕ್ಕೆ ಆಗಮನ :**</u> ಈ ಯೋಗವನ್ನು ಅನೇಕ ಸತ್ಪಾತ್ರರಿಗೆ ಹಂಚಬೇಕೆಂಬ ಆಸೆ ಅಂಕುರಿಸಿ ಸ್ವರ್ಣವಲ್ಲೀ ಸಂಸ್ಥಾನದ ಈಗಿನ ಪೀಠಾಧಿಪತಿಗಳಾದ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರನ್ನು ಭೇಟಿಮಾಡಿ ಯೋಗಸಾಧನಾ ಪಥವನ್ನು ವಿವರಿಸಿದರು. ಆಸಕ್ತಿ ತೋರಿದ ಶ್ರೀ ಶ್ರೀಗಳವರು ಸಂಸ್ಥಾನಕ್ಕೆ ಕರೆಸಿಕೊಂಡು ಯೋಗಸಾಧನಾರಹಸ್ಯಗಳನ್ನೆಲ್ಲ ಅವರಿಂದ ತಿಳಿದುಕೊಂಡರು. ಹೀಗೆಯೇ ಬೆಳೆದ ವಾತ್ಸಲ್ಯದ ಕೊಂಡಿ ಯೋಗಿವರರನ್ನು ಸಂಸ್ಥಾನದಲ್ಲಿಯೇ ಇರುವಂತೆ ಮಾಡಿತು. ಮಠದಲ್ಲಿಯೇ ಇದ್ದು ಬೇರೆ ಬೇರೆ ಪೀಠಾಧಿಪತಿಗಳಿಗೆ ಹಾಗೂ ಆಸಕ್ತರಿಗೆ ಉಪದೇಶಿಸಿ (ಶಕ್ತಿಪಾತದ ಮೂಲಕ) ಈ ಖೇಚರಿ ವಿದ್ಯೆಯನ್ನು ಉಳಿಸಿ ಬೆಳೆಸಿದರು. ಶ್ರೀಗಳವರ ಜೊತೆ ಅನೇಕ ಯಜ್ಞ–ಯಾಗ–ಸಭೆ–ಸಮಾರಂಭಗಳಲ್ಲಿ ಸಾನ್ನಿಧ್ಯ ನೀಡಿದ್ದರು. ತೀರ್ಥಕ್ಷೇತ್ರಗಳಿಗೆ ಭೇಟಿ ಇತ್ತಿದ್ದರು.

<u>**ಮಹಾಪ್ರಸ್ಥಾನ :**</u> ಕೊನೆ ದಿನಗಳಲ್ಲಿ ಅವರ ಶರೀರಾರೋಗ್ಯ ಅಷ್ಟೇನೂ ಸರಿಯಿರಲಿಲ್ಲ. ವೈದ್ಯರಿಂದ ಔಷಧ ಉಪಚಾರವೇನೋ ನಡೆಯುತ್ತಿತ್ತು. ದೇವಾಂಶಸಂಭೂತರಾದ ಅವರಿಗೆ ನಮ್ಮ ಈ ಲೌಕಿಕ ಔಷಧ ಉಪಚಾರ ಅಷ್ಟೇನೂ ಕಾರ್ಯ ಮಾಡಲಿಲ್ಲ. ಎಷ್ಟೇ ಆರೋಗ್ಯದ ತೊಂದರೆಯಾದರೂ ತಮ್ಮ ಯೋಗಸಾಧನೆಯನ್ನು ಮಾತ್ರ ನಿಲ್ಲಿಸಲಿಲ್ಲ. ಅದು ನಿರಂತರವಾಗಿ ಸಾಗುತ್ತಲೇ ಇತ್ತು. ಅವಿರತ ಯೋಗಸಾಧನೆ, ಅನುಷ್ಠಾನಗಳಿಂದ ದಿವ್ಯತೇಜೋಮೂರ್ತಿಗಳಾಗಿ ಕಂಗೊಳಿಸುತ್ತಿದ್ದರು. ಶರೀರದ ಮೇಲೆ ನಿರಾಸಕ್ತಿ ಬಂದಿತ್ತು. ಅಂತ:ಕರಣ ಪರಿಶುದ್ಧವಾಗಿ ಶೋಭಿಸುತ್ತಿತ್ತು. ಪರಮಾತ್ಮನಲ್ಲಿ ಒಂದಾಗುವ ಆ ದಿನವನ್ನು ಆಗಲೇ ಅವರು ತಿಳಿದಿದ್ದರು ಎನ್ನುವುದು ಅವರ ಮಾತಿನಲ್ಲೇ ವ್ಯಕ್ತವಾಗುತ್ತಿತ್ತು. ತನ್ನ ಕೊನೆಯ ಗಳಿಗೆಯವರೆಗಿನ ಎಲ್ಲ ಸ್ತರಗಳನ್ನು ಅವರು ನಿಶ್ಚಯಿಸಿಕೊಂಡಿದ್ದರು. ವಿಕೃತಿ ಸಂ॥ದ ಪುಷ್ಯಮಾಸ ಹುಣ್ಣಿಮೆ ಬುಧವಾರ ಬ್ರಾಹ್ಮೀಮುಹೂರ್ತದಲ್ಲಿ 5.10 ನಿಮಿಷಕ್ಕೆ ಪ.ಪೂ. ಖೇಚರಿ ಯೋಗಿಗಳು ಒಮ್ಮೆಲೆ ಶರೀರ ತ್ಯಾಗ ಮಾಡಿ ಬ್ರಹ್ಮೈಕ್ಯರಾದರು. ಅನಂತದಲ್ಲಿ ಲೀನವಾದರು.

<u>**ಚಿರಸಮಾಧಿ :**</u> ಅದೇ ದಿನ ರಾತ್ರಿ ವಿವಿಧ ಆಶ್ರಮಗಳ ಹಾಗೂ ಮಠ–ಮಾನ್ಯಗಳ ಅನೇಕ ಪ್ರತಿನಿಧಿಗಳ ಸನ್ನಿಧಿಯಲ್ಲಿ ಸ್ವರ್ಣವಲ್ಲೀ ಶ್ರೀಗಳ ಅನುಜ್ಞೆಯ ಪ್ರಕಾರ ಚಿರಸಮಾಧಿ ಮಾಡಲಾಯಿತು. ಸಾಕ್ಷಾತ್ ಭಗವಾನ್ ಗುರುವರನು ಈಗ ಗುರುಮೂರ್ತಿಮಂದಿರದಲ್ಲಿ ಭಕ್ತರಿಂದ ಸೇವೆಯನ್ನು ಸ್ವೀಕರಿಸುತ್ತಾ ಭಕ್ತರ ಮನೋವಾಂಛೆಯನ್ನು ಈಡೇರಿಸುತ್ತಾ ನೊಂದ ಜೀವಿಗಳಿಗೆ ಆನಂದವನ್ನೀಯುತ್ತಾ ಜ್ಯೋತಿರ್ಲಿಂಗ ಸ್ವರೂಪಿಯಾಗಿ ಶಾಂತವಾಗಿ ಕುಳಿತಿರುವನು. <u>**ವಾರ್ಷಿಕ ಆರಾಧನೆಯ ಪುಣ್ಯದಿನ ದಿನಾಂಕ:– 09–01–2012 ಈ ದಿನ ಜರುಗಲಿದೆ. ಈ ಪುಣ್ಯದಿವಸಕ್ಕೆ ತಾವೆಲ್ಲಾ ಬಂದು ತೀರ್ಥ–ಪ್ರಸಾದ ಸ್ವೀಕರಿಸಿ ಧನ್ಯರಾಗಬೇಕೆಂದು ವಿನಂತಿ.**</u> ಜಗತ್ಕಲ್ಯಾಣ ಆಕಾಂಕ್ಷಿಗಳಾದ ಮಹಾನ್ ಸಂತ, ವಿಭೂತಿಪುರುಷ ಪ.ಪೂ.ನೃಸಿಂಹಾನಂದ ಸರಸ್ವತೀ ಯೋಗಿಗಳ ಅನುಷ್ಠಾನ, ತಪಸ್ಸು, ಅಲೌಕಿಕ ಮಹಾನ್ ಶ್ರೇಯಸ್ಸು ಇವರಿಂದ ನಮಗೆ ಪ್ರಾಪ್ತವಾಗಲೆಂದು ಆಶಿಸುತ್ತಾ, ಇವರ ಪಾದಪದ್ಮಗಳಿಗೆ ಅನಂತ ಪ್ರಣಾ ಮಗಳನ್ನು ಅರ್ಪಿಸೋಣ.

ಇಂತು ಗುರುಸೇವೆಯಲ್ಲಿ

**ಹೇಮಂತ ಕೃಷ್ಣ ಹೆಗಡೆ ಉಲ್ಲಾಳಕೊಪ್ಪ**

## ನಗು ಮುಖ

ಮುಖ ಮಂಟಪಕೆ, ಶೋಭೆ ಈ ಹಲ್ಲು
ಹೇಗೆ ತೋಟಕ್ಕೆ ಚಂದ ಅರಳಿದ ಹೂವು

ಮುತ್ತಿನಂಥ ಹಲ್ಲು ಮುಖಕಮಲ ಅರಳಿಸುವುದು
ಮುಖದ ಕಾಂತಿ, ಸೌಂದರ್ಯ ವೃದ್ಧಿಸುವದು

ಎಪ್ಪತ್ತರ ಮುದುಕ ತರುಣನಂತೆ ಕಾಣುವನು
ಹುಳುಕು ಮುರುಕು ಹಲ್ಲಿಂದ ತರುಣ ಕೋತಿಯಾಗುವನು

ನಗು ಮೊಗಕೆ ಬಿಳಿ ಹಲ್ಲೇ ಕೋಲ್ಮಿಂಚು
ಕೆಂದುಟಿಯೇ ಆಕರ್ಷಕ ಕಾಮನಬಿಲ್ಲು

ಹೋಳಿಗೆ ಬಿಸಿತುಪ್ಪ ಜಿಹ್ವೆಗೆ ರುಚಿಯು
ಶುದ್ಧ ನೈರ್ಮಲ್ಯ ಹವೆಯೇ ನಮ್ಮ ಜೀವದುಸಿರು

ಕೆಟ್ಟ ಹಲ್ಲು ಕಳೆದು ಧರಿಸು ನೀ ಕೃತಕ ಹಲ್ಲು
ಇದು ವಿಜ್ಞಾನ ನಮಗಿತ್ತ ಶ್ರೇಷ್ಠ ವರವು

ತಿಂದು ತೇಗಲು ಶುಚಿ ರುಚಿ ಭಕ್ಷ್ಯ
ಹಲ್ಲಿನ ಆರೋಗ್ಯವೇ ಪ್ರಾಮುಖ್ಯ

ಸುಂದರ ದೃಶ್ಯ ಕಣ್ಣಿಗದೆಷ್ಟು ತಂಪು
ಸುಮಧುರ ಸಂಗೀತ ಕಿವಿಗೆ ಇಂಪು

ಎಲ್ಲಾ ಅಂಗಗಳು ಆರೋಗ್ಯವಾಗಿದ್ದರೆ
ಸುಖ ಶಾಂತಿ ಲಭಿಸುವದು ನಮ್ಮ ಮನಕೆ

ಬಾಯಿಯೇ ನಮ್ಮ ಬದುಕಿನ ಮೂಲ
ಬಾಯಿ ಗಟ್ಟಿ ಇದ್ದವನೆಂದೂ ಸೋಲ

ನಕ್ಕು ನಗಿಸಲು ಸದಾ ನಗುತ್ತಿರು
ನಿಮ್ಮ ಬಾಳ ಬೆಳಿಸಿ ಬೆಳಗಿಸು

**ಶಾಂತಾರಾಮ ಎನ್. ಕೂರ್ಸೆ**




*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR,*** *GHATKOPAR IN THE MEMORY OF* ***LATE SHRI T. R. BHATSHIKAR*** *(DEC.-2012)*

# ಭಾಗವತ ಮಹಾತ್ಮ್ಯೆ

*ಸಂಗ್ರಹಿಸಿ ಸಂಕ್ಷಿಪ್ತವಾಗಿ ಬರೆದವರು :* **ಡಾ| ವಸಂತ ಭಾಗವತ ವೀಣೆ**

***( ಈ ಭಾಗವತ ಕಥೆಯು ಮಕ್ಕಳಿಗಾಗಿ ಇದೆ. ಅವರಿಗೆ ಓದಲಿಕ್ಕೆ ಬರದಿದ್ದರೆ ಹಿರಿಯರು ಓದಿ ಹೇಳಬೇಕಾಗಿ ವಿನಂತಿ. )***

## ಗೋವರ್ಧನ ಧಾರಣ

ಒಂದು ದಿನ ಸರ್ವ ಗೋಪರು ಇಂದ್ರ ಯಜ್ಞ ಮಾಡುವ ಸಿದ್ಧತೆಯನ್ನು ಮಾಡಿದರು. ಇಂದ್ರನು ಅಹಂಕಾರದ ಮೂಲಕ ಗೋಪಾಲರಿಂದ ಯಜ್ಞ ಹಾಗೂ ಪೂಜೆ ಮಾಡಿಸಿಕೊಳ್ಳುತ್ತಿರುವ ವಿಷಯ ಭಗವಂತನಿಗೆ ತಿಳಿಯಿತು. ಅವನು ನಂದನಿಗೆ, "ನೀವು ಯಾರ ಉತ್ಸವವನ್ನು ಮಾಡುತ್ತಿರುವಿರಿ? ಇದು ಶಾಸ್ತ್ರ ಸಮ್ಮತವಾಗಿದೆಯೋ ಅಥವಾ ಲೌಕಿಕವಾಗಿದೆಯೋ?" ಎಂದು ಕೇಳಿದನು. ಆಗ ನಂದನು 'ಮಗನೇ ಭಗವಾನ್ ಇಂದ್ರನು ಮೇಘಗಳ ಅಧಿಪತಿಯಾಗಿರುವನು. ಅವನು ಸಂತುಷ್ಟನಾದರೆ ನಮಗೆ ವೇಳೆಗೆ ಸರಿಯಾಗಿ ಮಳೆಯನ್ನು ಕೊಟ್ಟು ಪುರುಷಾರ್ಥದ ಫಲ ಕೊಡುತ್ತಾನೆ. ಈ ಧರ್ಮವು ನಮ್ಮ ಕುಲಪರಂಪರೆಯಿಂದ ನಡೆದು ಬಂದಿದೆ' ಎಂದು ಹೇಳಿದನು.

ಆಗ ಶ್ರೀಕೃಷ್ಣನು 'ತಂದೆಯೇ ಪ್ರತಿಯೊಬ್ಬ ಮನುಷ್ಯ ಅಥವಾ ಪ್ರಾಣಿ ತನ್ನ ಕರ್ಮಕ್ಕೆ ಅನುಸರಿಸಿ ಜನ್ಮಕ್ಕೆ ಬರುವನು ಹಾಗೂ ತನ್ನ ಕರ್ಮಕ್ಕೆ ಅನುಸರಿಸಿ ಸುಖ-ದುಃಖ ಮತ್ತು ಅನ್ನ ವಸ್ತ್ರಾದಿಗಳು ದೊರೆಯುತ್ತವೆ. ತನ್ನ ಕರ್ಮದಲ್ಲಿ ಅಂದರೆ ನಶೀಬದಲ್ಲಿ ಇದ್ದರೆ ಅವನಿಗೆ ಸಿಕ್ಕೇ ಸಿಗುತ್ತದೆ. ಇಲ್ಲದಿದ್ದರೆ ಸಿಗುವುದೇ ಇಲ್ಲ. ಅನ್ನದ ಪ್ರತಿಯೊಂದು ಕಣದ ಮೇಲೆ ತಿನ್ನುವವನ ಹೆಸರು ಬರೆದೇ ಇರುತ್ತದೆ. ಅಂದ ಮೇಲೆ ಇಂದ್ರನೇನು ನಮಗೆ ತನ್ನ ಕೈಯಿಂದ ಕೊಡುವನೋ? ಅಥವಾ ನಮ್ಮ ಮೇಲೆ ಏನು ಉಪಕಾರ ಮಾಡುತ್ತಾನೆ? ಅದಕ್ಕಿಂತ ಈ ನಮ್ಮ ಗೋವರ್ಧನ ಪರ್ವತವಿರುತ್ತದೆ. ಅಲ್ಲಿ ಗೋಗಳು ದಿನಾಲೂ ಹುಲ್ಲು ಮೇಯುತ್ತವೆ. ಅದರಿಂದ ನಮಗೆ ಹಾಲು, ಬೆಣ್ಣೆ, ತುಪ್ಪ ಆದಿ ಸಿಗುತ್ತವೆ. ಅದರ ಪೂಜೆಯನ್ನು ಮಾಡಿ, ಪಕ್ವಾನ್ನಗಳ ನೈವೇದ್ಯ ತೋರಿಸಿ, ಉತ್ತಮ ಉತ್ಸವ ಮಾಡಿರಿ ಹಾಗೂ ಬ್ರಾಹ್ಮಣರಿಗೆ, ಗೋ ಹಾಗೂ ಗೋಪಾಲರಿಗೆಲ್ಲರಿಗೂ ಮೃಷ್ಟಾನ್ನದ ಪ್ರಸಾದ ಕೊಡಿರಿ' ಎಂದನು.

ಕೃಷ್ಣನ ಭಾಷಣವನ್ನು ಕೇಳಿ ಎಲ್ಲರಿಗೂ ಸರಿ ಎನಿಸಿತು. ನಂದ ಹಾಗೂ ಹಿರಿಯ ಗೋಪರೆಲ್ಲರೂ ಕೂಡಿ ಇಂದ್ರನಿಗಾಗಿ ಮಾಡುವ ಯಾಗವನ್ನು ರದ್ದುಗೊಳಿಸಿದರು ಹಾಗೂ ಗೋಗಳನ್ನು ಮುಂದೆ ಮಾಡಿ, ಬಂಡಿಗಳಲ್ಲಿ ಸಾಮಾನುಗಳನ್ನು ತುಂಬಿಕೊಂಡು ಗೋವರ್ಧನ ಪರ್ವತಕ್ಕೆ ಹೋಗಿ ಗಿರಿರಾಜನಿಗೆ ಪ್ರದಕ್ಷಿಣೆ ಹಾಕಿ ದೊಡ್ಡ ಉತ್ಸವ ಮಾಡಿದರು. ಶ್ರೀಕೃಷ್ಣನು ತಾನು ಸ್ವತಃ ವಿಶಾಲ ಶರೀರವನ್ನು ಪ್ರಕಟ ಮಾಡಿ ತಾನೇ ಗಿರಿರಾಜನಾದನು. ಹಾಗೂ ಇನ್ನೊಂದು ರೂಪದಿಂದ ವ್ರಜವಾಸಿಗಳ ಹತ್ತಿರ ನಿಂತು ತಾನೂ ಪ್ರಣಾಮ ಮಾಡಿದನು. ಹೀಗೆ ವಿಧಿಪೂರ್ವಕ ಗಿರಿರಾಜನನ್ನು ಪೂಜೆ ಮಾಡಿ ನೈವೇದ್ಯವನ್ನು ತೋರಿಸಿ ಪ್ರಸಾದವನ್ನು ಬ್ರಾಹ್ಮಣರಿಗೆ ಬಡಿಸಿ ತಾವೂ ಯಥೇಚ್ಛವಾಗಿ ಭೋಜನ ಮಾಡಿ ವ್ರಜಕ್ಕೆ ಮರಳಿದರು.

ಕೃಷ್ಣನ ಇಚ್ಛೆಯ ಮೇರೆಗೆ ತನ್ನ ಪೂಜೆ ನಿಲ್ಲಿಸಿದ್ದು ಇಂದ್ರನಿಗೆ ಗೊತ್ತಾಯಿತು. ಅವನಿಗೆ ಗೋಪರ ಮೇಲೆ ಬಹಳ ಕೋಪ ಬಂದಿತ್ತು ಹಾಗೂ ಬಾಲಕನಾಗಿದ್ದ ಭಗವಂತನನ್ನು ಮರೆತು ಬಿಟ್ಟನು. ಗೋಕುಲವಾಸಿ ಜನರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕಾಗಿ ಸಾಂವರ್ತಕ ಮೇಘಗಳಿಗೆ ಅಂದರೆ ಪ್ರಳಯ ಕಾಲದಲ್ಲಿ ಪೃಥ್ವಿಯನ್ನು ಮುಗಿಸಿಬಿಡುವ ಮೋಡಗಳಿಗೆ ಗೋಕುಲದಲ್ಲಿ ಪರ್ಜನ್ಯ ಮಾಡಿ, ಸರ್ವ ಜನರು ಹಾಗೂ ಗೋಗಳನ್ನೆಲ್ಲ ನಿರ್ನಾಮ ಮಾಡಲು ಆಜ್ಞಾಪಿಸಿದನು. ಅದರಂತೆ ಪ್ರಪಂಚದ ಸಾಂವರ್ತಕ ಮೇಘಗಳು ಆನೆಯ ಸೊಂಡೆಯಷ್ಟು ಗಡುತರವಾಗಿ ಮಳೆಗರೆಯ ಹತ್ತಿದವು. ನಾಲ್ಕೂ ದಿಕ್ಕುಗಳಲ್ಲಿ ಕ್ಷಣದಲ್ಲಿ ನೀರೇ ನೀರಾಯಿತು. ಗೋಕುಲದ ಜನರೆಲ್ಲ ಗಾಬರಿಯಾಗಿ ಶ್ರೀಕೃಷ್ಣನ ಮೊರೆ ಹೊಕ್ಕಿದರು. "ಶ್ರೀಕೃಷ್ಣಾ ನೀನು ಏಕಮಾತ್ರ ರಕ್ಷಕನಿರುವೆ. ಭಕ್ತವತ್ಸಲಾ, ಇಂದ್ರನ ಕ್ರೋಧದಿಂದ ನಮ್ಮನ್ನು ರಕ್ಷಿಸು" ಎಂದು ಬೇಡಿಕೊಂಡರು. ಆಗ ಶ್ರೀಕೃಷ್ಣನು "ನೀವೂ ಸ್ವಲ್ಪವೂ ಹೆದರಬೇಡಿ. ಯಾರೂ ಸಾಯುವುದಿಲ್ಲ. ನಾವು ಯಾರ ಪೂಜೆಯನ್ನು ಮಾಡಿರುವೆವೋ ಆ ಗೋವರ್ಧನನು ನಮ್ಮನ್ನು ರಕ್ಷಿಸುವನು. ಆ ಪರ್ವತದಲ್ಲಿ ಬೇಕಾದಷ್ಟು ಗುಹೆಗಳಿರುತ್ತವೆ. ನೀವೆಲ್ಲರೂ ನಿಮ್ಮ ಮನೆಯೊಳಗಿನ ಸರ್ವ ಸಾಮಾನುಗಳನ್ನು, ಆಕಳು, ಕರುಗಳ ಸಹಿತ ಆ ಗುಹೆಗಳಲ್ಲಿ ಸೇರಿಕೊಳ್ಳಿರಿ. ನೀವೇನೂ ಅಂಜಬೇಡಿರಿ" ಎಂದು ಆಶ್ವಾಸನೆ ಕೊಟ್ಟನು. ಅದರಂತೆ ಗೋಪ ಗೋಪಿಯರೆಲ್ಲರೂ ತಮ್ಮ ಸಾಮಾನು ಹಾಗೂ ಆಕಳುಗಳ ಸಹಿತ ಗುಹೆಗಳಲ್ಲಿ ಸುಖರೂಪವಾಗಿ ಕುಳಿತರು.

ಒಂದೇ ಸಮನೆ ಬಿರುಗಾಳಿ ಹಾಗೂ ಮಳೆಯು ಬೀಳುತ್ತಲೇ ಇತ್ತು. ಗೋವರ್ಧನವು ನೀರಿನಿಂದ ಸುತ್ತುಗಟ್ಟಲ್ಪಟ್ಟಿತು ಹಾಗೂ ನೀರು ಗುಹೆಗಳಲ್ಲಿ ಸೋರುವಂತೆ ತೋರ ಹತ್ತಿತು. ಪುನಃ ಮತ್ತೆ ಎಲ್ಲರೂ ಇನ್ನೇನು ಮಾಡಬೇಕೆಂದು ಗಾಬರಿಗೊಂಡರು. ಕೃಷ್ಣಾ ರಕ್ಷಿಸು ರಕ್ಷಿಸು ಎಂದು ದನ್ಯವಾಣಿಯಿಂದ ಬೇಡಿಕೊಂಡರು. ಆಗ ಭಕ್ತವತ್ಸಲನಾದ ಶ್ರೀಕೃಷ್ಣನು ಏನೂ ಚಿಂತಿಸಬೇಡಿರಿ ಎಂದು ಹೇಳಿ ಗುಹೆಯಿಂದ ಹೊರಗೆ ಬಂದು, ಒಂದು ಒಣಗಿದ ಎಲೆಯನ್ನು ಎತ್ತುವಂತೆ ಆ ಗೋವರ್ಧನ ಪರ್ವತವನ್ನು ಎತ್ತಿ ತನ್ನ ಎಡಗೈಯ ಕಿರುಬೆರಳಿನ ಮೇಲೆ ಹಿಡಿದನು. ಬ್ರಹ್ಮಾಂಡ ನಾಯಕ ಪರಮಾತ್ಮನಿಗೆ ಯಾವ ಕೆಲಸ ಅಶಕ್ಯ? ಶ್ರೀಕೃಷ್ಣನ ಅದ್ಭುತ ಶಕ್ತಿ ಹಾಗೂ ಸಾಮರ್ಥ್ಯವನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಶ್ರೀಕೃಷ್ಣನು "ಯಾರೂ ಯತ್‌ಕಿಂಚಿತ್ತವೂ ಹೆದರಬೇಡಿರಿ. ಗೋವರ್ಧನ ಪರ್ವತವು ನಿಮ್ಮ ಮೇಲೆ ಬೀಳುವುದಿಲ್ಲ" ಎಂದು ಹೇಳಿದನು.

ಮುಸಲಧಾರ ಅಖಂಡವೃಷ್ಟಿ ಹಾಗೆಯೇ ನಡೆದೇ ಇತ್ತು. ಒಂದು ದಿನವಾಯಿತು. ಎರಡು ದಿನಗಳಾದವು. ಮೂರು, ನಾಲ್ಕು, ಐದು, ಆರು, ಏಳು ಹೀಗೆ ಏಳು ದಿನಗಳಾದವು. ಭಗವಂತನ ಕಿರು ಬೆರಳಿನ ಮೇಲಿಂದ ಒಂದು ಕಣದಷ್ಟು ಕೂಡ ಪರ್ವತವು ಅಲುಗಾಡಲಿಲ್ಲ. ಈ ಅದ್ಭುತ ದೃಶ್ಯವನ್ನು ಕಂಡು ಇಂದ್ರನ ಗರ್ವ ಇಲ್ಲದಂತಾಯಿತು. ಅವನ ಕಣ್ಣುಗಳು ತೆರೆದವು. "ತಾನು ಯಾರನ್ನು ಬಾಲಕನೆಂದು ತಿಳಿದಿದ್ದೇನೋ ಅವನು ಅಖಿಲ ಬ್ರಹ್ಮಾಂಡ ನಾಯಕ ವೈಕುಂಠಪತಿ ಇರುವನು ಮತ್ತು ತಾನು ಅಲ್ಲದ್ದನ್ನು ಮಾಡಿದೆನು" ಎಂದುಕೊಂಡು ಮೇಘಗಳನ್ನು ನಿಲ್ಲಿಸಿದನು. ಆಗ ಸ್ವಚ್ಛವಾಗಿ ಬಿಸಿಲು ಬಿದ್ದಿತು. ಶ್ರೀಕೃಷ್ಣನು ತೀರ ಸಹಜವಾಗಿ ಆ ಪರ್ವತವನ್ನು ಕೆಳಗೆ ಇಳಿಸಿ 'ಇನ್ನು ಮಳೆ ಬರುವುದಿಲ್ಲ. ಎಲ್ಲರೂ ನಿಮ್ಮ ನಿಮ್ಮ ಸಾಮಾನುಗಳನ್ನು ತೆಗೆದುಕೊಂಡು ನಿಮ್ಮ ನಿಮ್ಮ ಮನೆಗೆ ತೆರಳಿರಿ' ಎಂದು ಹೇಳಿದನು. ಎಲ್ಲರಿಗೂ ಇಮ್ಮಡಿ ಆನಂದವಾಗಿ ಶ್ರೀಕೃಷ್ಣನನ್ನು ಹೆಗಲ ಮೇಲೆ ಕೂಡ್ರಿಸಿಕೊಂಡು ಕುಣಿದಾಡ ಹತ್ತಿದರು. 'ಕೃಷ್ಣಾ ನೀನು ಏಳು ವರುಷದ ಮಗುವಿದ್ದು, ಏಳು ದಿನಗಳ ಪರ್ಯಂತ ಅಹೋರಾತ್ರಿ ಈ ಪರ್ವತವನ್ನು ಹೇಗೆ ಎತ್ತಿ ಹಿಡಿದಿ? ನೀನು ಇರುವಿ ಎಂದು ನಾವು ಬದುಕಿರುವೆವು' ಎಂದು ಹೇಳಿ ತಮ್ಮ ತಮ್ಮ ಮನೆಗಳಿಗೆ ಹೋಗಿ ನೋಡಿದರೆ, ಗೋಕುಲದಲ್ಲಿ ನೆಲವೂ ಸಹ ನೀರಿನಿಂದ ತೊಯ್ದಿರಲಿಲ್ಲ! ಎಲ್ಲರಿಗೂ ಆಶ್ಚರ್ಯವಾಯಿತು. ಯಶೋದಾ, ರೋಹಿಣಿ, ಬಲರಾಮ ಹಾಗೂ ನಂದರು ಶ್ರೀಕೃಷ್ಣನನ್ನು ಪ್ರೇಮದಿಂದ ಬಿಗಿದಪ್ಪಿಕೊಂಡರು.

ವ್ರಜದ ಗೋಪರೆಲ್ಲರೂ ನಂದನ ಹತ್ತಿರ ಬಂದು 'ನನಗೆ ನಿನ್ನ ಮಗನ ಬಗೆ ಶಂಕೆ ಉಂಟಾಗಿದೆ. ಅವನ ಹತ್ತಿರ ಏನೋ ದೈವೀ ಶಕ್ತಿಯ ಸಾಮರ್ಥ್ಯವಿರುತ್ತದೆ. ಚಿಕ್ಕ ಮಗು ಇದ್ದಾಗಲೇ ಪೂತನೀ ರಾಕ್ಷಸಿಯನ್ನು ಕೊಂದನು ಹಾಗೂ ತ್ರಣವರ್ತ, ಬಕಾಸುರ, ಪ್ರಲಂಬಾಸುರ, ದೇವಕಾಸುರ ಆದಿ ಮಹಾನ್ ರಾಕ್ಷಸರನ್ನು ಕೊಂದನು. ಕಾಲಿಯಾನಂಥ ಭಯಂಕರ ನಾಗನನ್ನು ಯಮುನೆಯಿಂದ ಹೊರಗೆ ತಳ್ಳಿದನು. ಈಗ ಈ ಏಳು ವರುಷದ ಮಗುವು ಒಂದು ಕಿರುಬೆರಳಿನ ಮೇಲೆ ಏಳು ದಿವಸ ಪರ್ವತವನ್ನು ಎತ್ತಿದನು ಹಾಗೂ ನಮ್ಮೆಲ್ಲರನ್ನೂ ಮಹಾಪೂರದಿಂದ ರಕ್ಷಿಸಿದನು. ಒಂದು ಕ್ಷಣಕಾಲ ಕೃಷ್ಣನು ಕಣ್ಮರೆಯಾದರೆ ನಮಗೆಲ್ಲರಿಗೂ ಏನೋ ಕಸಿವಿಸಿಯಾಗುತ್ತದೆ. ಇವನು ಯಾವ ದೇವತೆಯಾಗಿರಬಹುದು?" ಎಂದು ಕೇಳಿದರು. ಆಗ ನಂದನು ನಮ್ಮ ಗುರು ಗರ್ಗಾಚಾರ್ಯರು "ಇವನು ಸಾಮಾನ್ಯನಲ್ಲ. ಎಲ್ಲ ರೀತಿಯಿಂದ ಪರಮೇಶ್ವರನಾಗಿದ್ದ. ಎಲ್ಲರಿಗೂ ಸುಖ ಕೊಡುತ್ತಾನೆಂದು ಚಿಕ್ಕವನಿದ್ದಾಗಲೇ ಹೇಳಿದ್ದಾರೆ. ಇದರಲ್ಲಿ ಆಶ್ಚರ್ಯ ಏನೂ ಇಲ್ಲ" ಎಂದು ಹೇಳಿದನು.

ತಾನು ಮಾಡಿದ ಅಪರಾಧದಿಂದ ಲಜ್ಜಿತನಾದ ಇಂದ್ರನು ಶ್ರೀಕೃಷ್ಣನ ಚರಣಗಳ ಮೇಲೆ ದಂಡವತ್ ಸಾಷ್ಟಾಂಗ ನಮಸ್ಕಾರ ಮಾಡಿ "ಹೇ ತ್ರೈಲೋಕ್ಯನಾಥ ನಿನಗೆ ಶರಣು ಬಂದಿರುವೆನು. ನನ್ನನ್ನು ಕ್ಷಮಿಸು. ಮುಂದೆ ಎಂದೂ ನನಗೆ ಇಂಥ ಬುದ್ಧಿ ಆಗದಿರಲಿ. ಇಷ್ಟು ನಿನ್ನ ಚರಣಗಳಲ್ಲಿ ನನ್ನ ವಿನಂತಿ ಇದೆ" ಎಂದು ಕಾಲಿಗೆ ಬಿದ್ದನು. ಆಗ ಭಗವಾನ್ ಶ್ರೀಕೃಷ್ಣನು ಮೇಘ ಗಂಭೀರವಾಣಿಯಿಂದ 'ಇಂದ್ರಾ, ನಾನೇ ಕೊಟ್ಟ ಸಂಪತ್ತಿನಿಂದ ಉನ್ಮತ್ತರಾದವರನ್ನು ಶುದ್ಧಿಯ ಮೇಲೆ ತಂದು ಅವರಿಗೆ ನನ್ನ ನೆನಪು ಉಳಿಯುವಂತೆ ಅವರಿಗೆ ಆಗಾಗ್ಗೆ ಶಿಕ್ಷೆ ಕೊಡುತ್ತೇನೆ. ಹೋಗು! ನಿನ್ನನ್ನು ಕ್ಷಮಿಸುತ್ತಿದ್ದೇನೆ. ನನ್ನ ನನಪು ಇಟ್ಟುಕೊಂಡು ರಾಜ್ಯಭಾರ ಮಾಡು' ಎಂದು ಹೇಳಿದನು. ಇಂದ್ರನು ಪುನಃ ಭಗವಂತನಿಗೆ ನಮಸ್ಕಾರ ಮಾಡಿ ಕಾಮಧೇನು ಹಾಗೂ ಐರಾವತಗಳಿಂದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿಸಿ ಸ್ವಗ್ರಾಮಕ್ಕೆ ಹೋದನು. ಅಂದಿನಿಂದ ಶ್ರೀಕೃಷ್ಣನು 'ಗೋವರ್ಧನ ಗಿರಿಧಾರಿ' ಯಾದನು. ●

*PAGE DONATED BY : **SHRI V. G. BHAT, NIGDI** (DEC.-2012)*

# ಸಂಭ್ರಮದ ಹವ್ಯಕ ಮಹಿಳಾ ಸಮಾವೇಶ-ಸಂಪನ್ನ




ನಾವು ಕೋಲಿನಂತೆ ನೇರವಾಗಿ ಬೆಳೆಯದೇ ಪಿರಮಿಡ್‌ನಂತೆ ವಿಸ್ತಾರವಾಗಿ ಭದ್ರ ಬುನಾದಿಯೊಂದಿಗೆ ಬೆಳೆಯಬೇಕು. ಆಗ ಮಾತ್ರ ಸಾಧನೆಯ ಉತ್ತುಂಗವನ್ನು ತಲುಪಲು ಸಾಧ್ಯ ಎಂದು ಶ್ರೀ ವಿಷ್ಣು ಶಾಸ್ತ್ರಿ ನುಡಿದರು.

ಡಿಸೆಂಬರ್ 11ರಂದು ಹವ್ಯಕ ಮಹಿಳಾ ವಿಭಾಗದವರಿಂದ ಕಾಂದಿವಲಿಯ ಹೊಟೇಲ್ ಸರೋವರದ ಸಭಾಗೃಹದಲ್ಲಿ ಆಯೋಜಿಸಲಾಗಿದ್ದ ಹವ್ಯಕ ಮಹಿಳಾ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಮಾತನಾಡಿದ ಅವರು ಕೋಲಿನಂತೆ ನಮ್ಮಷ್ಟಕ್ಕೆ ನಾವೇ ಬೆಳೆದರೆ ಎತ್ತರಕ್ಕೆ ಏರಿದಾಗ ಕೆಳಗೆ ಬೀಳುವ ಭಯವಿರುತ್ತದೆ. ಆದರೆ ಇತರರೊಡನೆ ಬೆರೆತು, ಲವಲವಿಕೆಯೊಂದಿಗೆ ಒಂದಾಗಿ ಪರಸ್ಪರ ಸಹಾಯದಿಂದ ಪಿರಮಿಡ್ಡಿನಂತೆ ಬೆಳೆದಾಗ ಎತ್ತರದಲ್ಲಿದ್ದರೂ ಕೆಳಗೆ ಬಿದ್ದರೆ ಎತ್ತಿ ಹಿಡಿಯುವ ಕೈಗಳಿರುತ್ತವೆ ಎನ್ನುವ ಧೈರ್ಯ, ಆತ್ಮವಿಶ್ವಾಸ ನಮ್ಮಲ್ಲಿರುತ್ತದೆ. ನಾವು ಬೇರೆಯವರಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದಾಗ ದೇವರು ಮೆಚ್ಚುತ್ತಾನೆ. ಆದ್ದರಿಂದ ಪರರ ಸುಖದಲ್ಲಿ ಭಾಗಿಯಾಗುವ ಮನಸ್ಸು ನಮ್ಮದಾಗುತ್ತದೆ ಎಂದು ನುಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಉಷಾ ವಿಷ್ಣು ಶಾಸ್ತ್ರಿ ವೇದಿಕೆಯಲ್ಲಿದ್ದರು.

ಮಹಿಳಾ ವಿಭಾಗದ ಅಧ್ಯಕ್ಷೆ ನ್ಯಾಯವಾದಿ ಅಮಿತಾ ಭಾಗ್ವತ್ ಅವರು ಪ್ರಾಸ್ತಾವಕವಾಗಿ ಮಾತನಾಡಿ ಮಹಿಳಾ ವಿಭಾಗವು ಸಮಾಜ ಬಾಂಧವರ ಆಶಾಕಿರಣವಾಗಿ ಸ್ಪಂದಿಸುತ್ತಿದೆ. ಭವಿಷ್ಯದಲ್ಲೂ ಸಮಾಜದ ಬಡ ವಿದ್ಯಾರ್ಥಿಗಳಿಗಷ್ಟೆ ಅಲ್ಲದೆ, ಮಹಿಳೆಯರಿಗೂ ವೈದ್ಯಕೀಯ ನೆರವು ಒದಗಿಸಬೇಕೆನ್ನುವ ಉದ್ದೇಶ ಹೊಂದಿದ್ದೇವೆ. ಅದರ ಸಫಲತೆಗಾಗಿ ಸಮಾಜ ಬಾಂಧವರು, ದಾನಿಗಳು ನೆರವಾಗುವಂತೆ ವಿನಂತಿಸಿದರು. ಮಹಿಳಾ ವಿಭಾಗದ ವಿದ್ಯಾನಿಧಿಗೆ 1 ಲಕ್ಷ ರೂಪಾಯಿ ದೇಣಿಗೆಯನ್ನಿತ್ತ, ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ವಿ. ಆರ್. ಶಾಸ್ತ್ರಿಯವರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಶ್ರೀ ಎನ್. ಆರ್. ಹೆಗಡೆ ಅವರು ಮಹಿಳಾ ವಿಭಾಗದ ಸಮಾಜಪರ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು.

'ಸಂಸ್ಕೃತಿಯ ರಕ್ಷಣೆಯಲ್ಲಿ ಪಾಲಕರ ಪಾತ್ರ' ಎನ್ನುವ ವಿಷಯದ ಮೇಲೆ ಉಪನ್ಯಾಸ ನೀಡಿದ ವಿದ್ವಾನ್ ನಾಗರಹಳ್ಳಿ ಪ್ರಹ್ಲಾದ ಆಚಾರ್ಯ ಅವರು, ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನು ನೀಡುವುದರ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡ ಹೋಗಬಹುದು. ಪಾಲಕರು ಮೊದಲು ಸಂಸ್ಕಾರವಂತ-ರಾಗಿರಬೇಕು. ಪುರಾತನ ಆಚಾರ-ವಿಚಾರಗಳ ಪಾಲನೆಯಲ್ಲಿ ತೊಡಗಿದಾಗ ಸಂಸ್ಕೃತಿ ಉಳಿಯಲು ಸಾಧ್ಯವಿದೆ. ಪುರಾತನ ಆಚಾರ ವಿಚಾರಗಳ ಪಾಲನೆ ಮೂಢನಂಬಿಕೆಗಳಲ್ಲ. ಅವುಗಳಲ್ಲಿ ಮನೋವಿಜ್ಞಾನ ಹಾಗೂ ವಿಜ್ಞಾನಗಳೂ ಸಮ್ಮಿಶ್ರಗೊಂಡಿವೆ. ಸಾತ್ವಿಕ ಆಹಾರ, ನಮ್ಮ ಸುತ್ತ ಮುತ್ತಲಿನ ಪರಿಸರ ನಮ್ಮ ಮನೋಧರ್ಮವನ್ನು ನಿರ್ಧರಿಸುವದರಿಂದ ಆ ಬಗ್ಗೆ ವಿಶೇಷ ಮುತುವರ್ಜಿ ವಹಿಸಬೇಕು''ಎಂದು ನುಡಿದರು.

ಡಾ। ಸಾಧನಾ ಹೆಗಡೆ ಥೈರಾಯಿಡ್ ರೋಗ ಹಾಗೂ ಅದರಿಂದಾಗುವ ಸಮಸ್ಯೆಗಳ ಬಗ್ಗೆ ವಿವರಿಸಿ, ರೋಗವನ್ನು ತಡೆಗಟ್ಟುವ ವಿಧಾನ, ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ಮಾಹಿತಿ ನೀಡಿದರು. ಸಮತೋಲನ ಆಹಾರ, ವ್ಯಾಯಾಮ ಇವುಗಳಿಂದ ರೋಗರುಜಿನಗಳು ಬರದಂತೆ ನಮ್ಮನ್ನು ನಾವು ಹೇಗೆ ಕಾಪಾಡಿಕೊಳ್ಳಬಹುದು ಎನ್ನುವ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು. ಸಭಿಕರ ಅನುಮಾನಗಳಿಗೆ ಉತ್ತರಿಸಿದರು.

ಹಿರಿಯ ಮಹಿಳೆಯರಾದ ಶ್ರೀಮತಿ ವಿಜಯಾ ಭಟ್, ಶ್ರೀಮತಿ ಲಕ್ಷ್ಮಿ ಬರವಣಿ, ಶ್ರೀಮತಿ ಗೀತಾ ಭಟ್, ಶ್ರೀಮತಿ ಅನಸೂಯ ಕುರ್ಸೆ, ಶ್ರೀಮತಿ ಪದ್ಮಾವತಿ ಹೆಗಡೆಕಟ್ಟಾ, ಶ್ರೀಮತಿ ಕಮಲಾ ಯಾಜಿ ಇವರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದ ಇವರು ಮಹಿಳಾ ವಿಭಾಗದ ಕಾರ್ಯಕಲಾಪಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಇನ್ನಷ್ಟು ಅಭಿವೃದ್ಧಿ ಹೊಂದಲಿ ಎಂದು ಆಶಯ ವ್ಯಕ್ತಪಡಿಸಿದರು.

ಕುಮಾರಿ ಸೀಮಾ ಭಟ್, ಮೈತ್ರಿ ಭಟ್, ನಿಯತಿ ಭಟ್ ಹಾಗೂ ನಮಿತಾ ಭಟ್, ಇವರಿಂದ ಪ್ರಾರ್ಥನೆ ನಡೆಯಿತು. ರೂಪಾ ಭಟ್, ಅರ್ಪಣಾ ಭಟ್, ತನುಜಾ ಭಟ್, ಶಶಿಕಲಾ ರಾವ್ ಗುಂಪಿನ ನೃತ್ಯವು ಜನರನ್ನು ರಂಜಿಸಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಶಾಂತಾ ಶಾಸ್ತ್ರಿ ಹಾಗೂ ಶ್ರೀಮತಿ ಅಮಿತಾ ಭಾಗ್ವತ್ ಸ್ವರಚಿತ ಹವ್ಯಕ ಗೀತೆಯನ್ನು ವಾಚಿಸಿದರು. ಕುಮಾರಿ ಯಶಶ್ರೀ ಅಕದಾಸ ಹಾಗೂ ಕುಮಾರಿ ಮಯೂರಿ ದೇಶಮುಖ್ ಇವರು ಶಾಸ್ತ್ರೀಯ ನೃತ್ಯವನ್ನು ಸುಂದರವಾಗಿ ಸಾದರ ಪಡಿಸಿದರು. ಶ್ರೀಮತಿ ತನುಜಾ ಭಟ್ ಸಂಗಡಿಗರಿಂದ ಅಂತಾಕ್ಷರಿ ವಿಶಿಷ್ಟ ಬಗೆಯದಾಗಿತ್ತು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸಂಗೀತ ವಿದುಷಿ ಶ್ರೀಮತಿ ವೀಣಾ ಶಾಸ್ತ್ರಿ ಅವರಿಂದ ಭಕ್ತಿಗೀತೆ, ಭಾವಗೀತೆಗಳನ್ನು ಒಳಗೊಂಡ ಸಂಗೀತ ಸುಧೆ ಕಾರ್ಯಕ್ರಮ ನಡೆಯಿತು. ಅವನ ಗಾನ ಸುಧೆ ಸಭಿಕರನ್ನು ಹೊಸಲೋಕದತ್ತ ಕರೆದೊಯ್ಯಿತು.

ಮಹಿಳಾ ವಿಭಾಗದ ಕಾರ್ಯದರ್ಶಿ ತನುಜಾ ಹೆಗಡೆ ಸ್ವಾಗತಿಸಿದರು. ಸಂಚಾಲಕಿ ಉಮಾಸ್ವಾಮಿ ವಂದಿಸಿದರು. ರೂಪಾ ಭಟ್ ಮತ್ತು ಶಶಿಕಲಾ ಹೆಗಡೆ ಕಾರ್ಯಕ್ರಮ ನಿರೂಪಿಸಿದರು.

## ಹೊಸವರ್ಷ

ಬರುತಿದೆ ಹೊಸವರ್ಷ
ತರುತಿದೆ ನಮಗೆಲ್ಲಾ ಹರ್ಷ

ಕಾಯಕವೇ ಕೈಲಾಸ
ಮಾಡದಿರಿ ವೃಥಾ ವಿಲಾಸ
ಬಾಳಿನಾ ಅನುಭವಕೆ ಬೆಲೆಕೊಟ್ಟು
ಕಳೆದ ಒಳಿತನು ನೆನಪಿಟ್ಟು
ನಾಳಿನಾ ಸುಖಕೆ ಆಸೆಪಟ್ಟು
ಜೀವನದ ಉದ್ದಿಶ್ಯ ಕಣ್ಣ ಮುಂದಿಟ್ಟು

ಹೊಸ ಸ್ವಪ್ನಾ ನೆನೆಯಿತಾ
ಕಷ್ಟ ಕಾರ್ಪಣ್ಯ ಮರೆಯುತಾ
ಮುನ್ನಡೆಯಿರಿ ಜೀವನದಾ ರಸ್ತೆಯಲಿ
ಸಾಕಾರವಾಗಲಿ ಜೀವನ ದೇವನ ಆಶ್ರಯದಲಿ

**ಯಸ್. ಎನ್. ಕುರ್ಸೆ, ಪುಣೆ**

*PAGE DONATED BY :* ***WELL WISHER OF HWT***

# NAGARATNA HEGDE: BORN TO WORKING-CLASS PARENTS, STAR SCIENTIST AT CAMBRIDGE

In the mornings, her mother worked as a cook. In the afternoons, both her mother and father went to work in a cashew nut factory. In the evenings, they made papadams (spicy crackers served with meals) and sold them on the street. They did these multiple jobs that Brahmins in their coastal Karnataka neighbourhood didn't do because they had a mission: send their daughter to school.

Nagaratna Hegde, 26, says her parents were semi-literate, but they wanted their children - she and her brother - to excel in studies like others in their agraharam (Brahmin ghetto) at Karki in the Uttara Kannada district of the state. "Ours was the poorest family among some 50-odd ones in that agraharam, but my parents wanted us [children] to become 'prosperous' like the educated, 'Americatravelling' neighbours," she says.

A few months ago, Hegde authored a PhD report at Cambridge University which found that thiostrepton, a naturally occurring molecule, can stop the spread of breast cancer. Which meant, breast cancer could soon be treated with potent, selectively targeting drugs without surgical removal of the affected part. The report, published in Nature Chemistry, has received wide acclaim.

"Her parents wouldn't have been able to send her to college had she not won scholarship after scholarship for academic excellence," says a senior IAS officer who has known the family for long; he didn't wish to be named. Hegde went on to top the Karnataka Board exam in her 10th standard. "It was then that people started noticing her, and offering her financial aid to pursue her studies," says the IAS officer.

### Scholarships, Scholarships

After completing her pre-university course (12th standard equivalent) from Karnataka University, Dharwad, magna cum laude in 2002, Hegde enrolled for bachelors in mathematics in which she won the gold medal. She had already secured UGC and several other scholarships for rank holders. Then she did her MSc in organic chemistry from the same university. During summer, after completing her post-graduation, she assisted G Mugesh, associate professor at IISc, Bangalore, in a research on anti-thyroid drugs. "I had applied to several universities, and it was my work at IISc that Cambridge guys found attractive," says Hegde.

"She is a very very bright girl. She came to work in my lab in the summer of 2006 on anti-thyroid drugs. It was after she did her summer workshop here that Shankar Balasubramanian called me to enquire about her," says Mugesh, referring to her would-be guide at the department of chemistry at Cambridge University. After securing the S Siddapa Endowment Scholarship and VV Badiger Scholarship (for securing 1st rank in MSc chemistry), more scholarships came her way, including Cambridge Commonwealth Trust fellowship.

### Culture Shock & Alienation

"She is a very modest, quiet and shy person," says Balasubramanian, a highly respected Indian-origin professor at Cambridge. "I think she was in a bit of culture shock initially. I think it wasn't easy for her," says he. For her part, Hegde, whose first overseas travel was to join Cambridge University, found it difficult to adjust to the "parties-infested" campus.

None of her close relatives drank alcohol, which she thought was "a dreaded evil". Her "vegetarian ways" didn't find much acceptance among the rest of the team either, initially.

### Notes Balasubramanian:

"My team is quite international in nature. Though it wasn't easy for her in the beginning, she found it interesting."

"She used to call up home every night and complain. She wanted to return. She didn't like it in the UK in the whole of first year of her research," says Hegde's 30-year-old husband Vishnu Hebbar, who, interestingly, is an astrologer.

### Faith in Astrology

In fact, it was astrology that brought Hegde and Hebbar together. She had come to seek his guidance on whether to take up a job or continue studies after her MSc. She was under pressure from close relatives to start earning to take care of her younger brother and cousins.

And when Hegde sought advice from her spiritual guru, Shri Raghaveshwara Swamiji of Shri Ramachandrapura Mutt, Hosanagara, on the issue, he suggested that she meet Hebbar. "I advised her to focus on studies. It was then that she rushed to obtain a passport and a visa so that she could travel to the UK," recalls Hebbar. "We met and the rest is history," says he, about how Cupid struck, ending in a marriage.

A die-hard believer in astrology, Hegde says she chose to research on thiostrepton after consulting with her astrologer-husband. In fact, Balasubramanian had other "options" for her. "She took a big risk ... I credit her with a lot of enthusiasm to identify an interesting research problem," says Balasubramanian, adding that Hegde's research reveals new insights into the mechanism of the molecule. Maybe one day someone could make a derivative of this molecule to treat breast cancer, he notes.

**(Courtesy : ET)**

# ಸಂಕ್ಷಿಪ್ತ ಸುದ್ದಿಗಳು

## Shri, Shri Shri Raghaveshwara Bharathi Mahaswamiji; visit to Mumbai

Shri Shri Shri Raghaveshwara Bharathi Mahaswamiji will be coming to Mumbai on 10th January 2012 and will stay at Kolad – Amrutdhara Goushala from 10th to 15th January 2012.

During Guruji's visit, disciples can book for Padapooja and take blessings of Guruji. For any further details please contact the following persons.

| | |
|---|---|
| Ishwari Bhat | – 9158064444 |
| Usha Bhat | – 9869482205 |
| N. G. Hegde | – 9892214345 |
| Kuloor Subramanya Bhat | – 9594165004 |
| R. S. Hegde | – 9869429742 |
| L. A. Hegde | – 8108287244 / 0251 – 2403289 |

Guru Seva Samiti

## Saartha Foundation – Scholarship Disbursement Programme.



Saartha Foundation, a charitable trust founded by Mr. Gopalkrishna Ugru (Havyaka LM No.466) who is also the president of the Foundation, is engaged in providing assistance and encouragement to the needy scholars of North Kanara region. Mr. Kiran Upadhyaya of Bahrain is the vice president. Well known Teacher and retired head master Mr. Shankar N. Bhat is the secretary. Other members include Retd. Joint Director P. N Hegde, Noted Industrialist Mr. Vasant Rao and Mr. R. S. Hegde, retd. Head Master of Karki high school.

This year the Foundation disbursed scholarships totaling Rs. 1,50,000/- to 216 students of the district at a function organized on 20th November 2011 at Havyaka Sabha Bhavan, Kumta. The Tahsildar of Kumta Mr. V. B Fernandes inaugurated the function. Mr. S. S. Bhat, Retd. DGM, KSLD Bank, Karnataka was the chief guest. Dr. T. T. Hegde, the well known doctor and social worker presided over the function.

The criteria for awarding the scholarships are the merit and financial conditions of the parents. Based on the principle that only those who need should get the assistance, 216 students among the 472 applicants were selected by the committee for this year's scholarship.

The foundation is planning to implement better scrutiny methods and restrict the number of beneficiaries for next year so as to make the assistance more meaningful.

(***Reported : Ramakant Shastri***)

## Donors, Women Welfare Cell

| | |
|---|---|
| Shri S. L. Bhat | Rs. 51,000/- |
| Smt. Amita Bhagwat | Rs. 3000/- |
| Smt. Padmavati Hegdekatte | Rs. 1511/- |
| Shri Prabhakar Bhat | Rs. 500/- |
| Smt. Lalita Bhagwat | Rs. 500/- |

Received donation of Rs. 2000/- from Smt. Sharada and Shri D. P. Karki on the happy occasion of the Birth of their grand daughters **Anushka and Rituma.**

## ಮತ್ಸ್ಯಕನ್ಯೆ

ಸಾಗರದ ತೀರದಲಿ ಬೆಳ್ಳಿನೊರೆಯನು ತೂರಿ
ಏರಿಳಿವ ತೆರೆಗಳಿಗೆ ಲೆಕ್ಕವಿಲ್ಲ ।
ಬೈಗು ಹರಿಯುವ ಮುನ್ನ ಬಲೆಯ ಬೀಸಲು ಹೋದ
ಸಂಜೆಯಾಯಿತು ಚೆನ್ನನೇಕೇ ಬಂದಿಲ್ಲ? ॥೧॥

ಕನ್ನೆ ಹಲುಬಿದಳಿಂತು ಕಡಲತಡಿಯಲಿ ನಿಂತು
ಹುಬ್ಬಿಗೇರಿಸಿ ಕಣ್ಣ ದೂರದಲಿ ನೋಡಿ
ಬಿರುಗಾಳಿ ಬೀಸುತಿರೆ ಶಂಕೆಗಳು ತೇಲಿಬರೆ
ಕಡಲ ಸೇರಿತು ಅವಳ ಕಣ್ಣೀರ ಕೋಡಿ ॥೨॥

ತುತ್ತು ಗಂಜಿಯನುಂಡು ಮುತ್ತಿಟ್ಟು ಹೋದವನು
ಬಂದೇ ಬರುವನು ಕೆಟ್ಟ ಶಂಕೆ ಏಕೆ?
ನನ್ನ ಬಾಳಿನ ಒಲವು ಅವನ ತೋಳಿನ ಬಲವು
ಒಂದುಗೂಡಿರೆ ಬೇರೆ ರಕ್ಷೆ ಬೇಕೆ? ॥೩॥

ನಿನ್ನ ಗೆಳೆಯರು ಬಂದು ಸಮಯವೆಷ್ಟೋ ಸಂದು
ಅವರ ಮೀನುಗಳೆಲ್ಲ ಮಾರಿಯಾಯ್ತು
ಹಿಂದುಳಿದೆ ನೀನಿಂದು ಏನೊ ಸಂಕಟ ಬಂದು
ಬಾರದಿರೆ ನಮ್ಮೀಕತೆ ಮುಗಿದೆ ಹೋಯ್ತು ॥೪॥

ಯಾವ ದಿನವೇ ಇರಲಿ ಗಾಳಿಮಳೆಯೇ ಬರಲಿ
ನಿನ್ನ ಮೀನಕೆ ಜನರು ಕಾದಿರುವರು
ಕೊರೆವ ಚಳಿಯಲಿ ಮಿಂದು
ತೊರೆಯ ಹೊಡೆತದಿ ನೊಂದು ॥೫॥

ಇಂದು ಊರಿನ ತುಂಬ ನಾಡದೇವಿಯ ಹಬ್ಬ
ಜನರು ನಡೆದಿಹರು ದೇವತೆಯ ಪರಿಸರಕೆ
ನೀನು ಸುಖವಾಗಿಬರೆ ಊರದೇವಿಗೆ ಇಂದು
ಸಲಿಸುವೆನು ಅರಿಷಿಣ-ಕುಂಕುಮದ ಹರಕೆ ॥೬॥

ಅಲೆಯಲಿ ತೇಲುತಿಹ ಚೆನ್ನನನು ಕಂಡಳು
ಚೀರಿದಳು ಹಾರಿದಳು ನೀರಿನೊಳಗೆ
ಬಾಳನದಿ ಸೆಳವಿನಲಿ ಕೂಡಿ ಚಿರಶಾಂತಿಯನು
ಹೊಂದಿದರು ಪಡುಗಡಲ ಆಳದೊಳಗೆ ॥೭॥

ಪಿ. ಜಿ. ಭಟ್, ಸಿರ್ಸಿ

*PAGE DONATED BY :* ***SHRI N. R. HEGDE, DOMBIVLI*** *(DEC.-2012)*

# FELICITATION



**Smt. Laxmi Baravani, Smt. Anasuya Kurse, Smt. Seeta Bhat, Smt. Padmavati Hegdekatte, Smt. Vijaya Bhat**




**Chief Guest Shri V. R. Shastri**



**Speaker Acharya Nagarhalli Prahlad**



**Speaker Dr. (Smt.) Sadhana Hegde**



**Vidushi Veena Shastri**

*PAGE DONATED BY : **HEGDE HOSPITAL,** CHEMBUR, COURTESY : **DR. DINESH HEGDE** (DEC.-2012)*

*RNI NO. MAHBIL / 2000 / 746,*
*Postal R.NO. MH/MR/N/161/MBI/2012-2014*

*Posted at Mumbai Patrika Channel Stg. Office Mumbai-400 001*

**Date of Posting :**
**27, 28th of every previous month**

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**REGISTERED NEWSPAPER**

**To,**

# CULTURAL PROGRAMME













*PAGE DONATED BY :* ***SHRI VIVEK BHAGWAT,*** *MULUND (DEC.-2012)*